## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

**ಸಿ.ಸಿ.ನಂಃ 3704/2023** **ಸಿ.ಡಬ್ಲ್ಯೂ–10 ಪಿ.ಡಬ್ಲ್ಯೂ-08**

| | | |
|---|---|---|
| ಹೆಸರು | ಃ | ಈರಮ್ಮ |
| ತಂದೆಃ ಗಂಡ | ಃ | ಸೂರ್ಯಕಾಂತ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ತೆಲ್ಲೂರು |

**ದಿನಾಂಕ 30.07.2025**
**ಸತ್ಯ ಪ್ರತಿಜ್ಞೆಯ ಮೇರೆಗೆ**

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿಯ ಪರಿಚಯ ಇರುತ್ತದೆ. ಚಾಸಾ-1 ನನ್ನ ಮಗ. ಚಾಸಾ 2 ರಿಂದ 5 ರವರ ಪರಿಚಯ ಇರುತ್ತದೆ. ಚಾಸಾ-6 ನನ್ನ ಭಾವ. ಚಾಸಾ-11 ನನ್ನ ಸೊಸೆ, ಚಾಸಾ-12 ಮೈದುನ, ಚಾಸಾ -13 ನನ್ನ ಅಳಿಯ. ಮೃತ ಸೂರ್ಯಾಕಾಂತ ನನ್ನ ಗಂಡನಾಗಬೇಕು.

ಘಟನೆ ನಡೆದ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ ಆದರೆ ಆ ದಿನ ನನ್ನ ಗಂಡ ಜಮೀನಿನಿಂದ ಮರಳಿ ಬರುವಾಗ ರಾತ್ರಿ ಸುಮಾರು 9 ಗಂಟೆಗೆ ಸಂಭಸ್ಥಾನಿ ಫೂಲ್ ಹತ್ತಿರ ಅವರಿಗೆ ಅಪಘಾತ ಆಗಿರುತ್ತದೆ. ನಂತರ ಊರಿನ ಜನರು ಆಂಬುಲೆನ್ಸ ಬಂದ ನಂತರ ಚಾಸಾ 7 ಮತ್ತು ಇತರರು ಸೇರಿಕೊಂಡು ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಪಘಾತದಿಂದಾಗಿ ನನ್ನ ಗಂಡನಿಗೆ ತಲೆಗೆ ಪೆಟ್ಟಾಗಿತ್ತು. ಕಣ್ಣು ಗುಡ್ಡೆಗಳು ಹೊರಗೆ ಬಂದಿದ್ದವು. ಮೊಣಕಾಲುಗಳು ಒಡೆದಿದ್ದವು. ಎದೆಗೆ ಒಳಪೆಟ್ಟಾಗಿತ್ತು. ಆಸ್ಪತ್ರೆಯಲ್ಲಿ ದಾಖಲಿಸಿದ ನಂತರ ಚಿಕಿತ್ಸೆ ಪಡೆದುಕೊಂಡರು ಸಹಿತ ನನ್ನ ಗಂಡನಿಗೆ ಆದ ಗಾಯದಿಂದ ಹುಷಾರು ಆಗಿರಲಿಲ್ಲ. ನಂತರ ಅವರು ಕಾರು ಹುಣ್ಣಿಮೆ ದಿನ ತೀರಿಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿಃ 26.04.2023 ರಂದು ನನಗೆ ಮತ್ತು ಚಾಸಾ 11 ರವರಿಗೆ ಮನೆಯಲ್ಲಿದ್ದಾಗ ಮೃತ ಸೂರ್ಯಕಾಂತ ರವರು ಜಮೀನಿಗೆ ಹೋಗಿ ಬರುತ್ತೇನೆ ಅಂತ ತಿಳಿಸಿ ಹೋಗಿರುತ್ತಾರೆ ಅಂದರೆ ಸರಿ. ಸಾ. 6-15 ಗಂಟೆ ಸುಮಾರಿಗೆ ಚಾಸಾ 6 ರವರಿಗೆ ಚಾಸಾ7 ರವರು ಕರೆ ಮಾಡಿ ಸಾಯಂಕಾಲ ಅವರ ಮನೆಯ ಮುಂದೆ ಚಾಸಾ 8 ಮತ್ತು 9 ರವರು ಮಾತಾನಾಡುತ್ತಾ ನಿಂತಾಗ ಮೃತ ಸೂರ್ಯಕಾಂತ ರವರಿಗೆ ಆದ ಅಪಘಾತದ ಬಗ್ಗೆ ತಿಳಿಸಿರುತ್ತಾರೆ ಅಂದರೆ ಸರಿ. ನನ್ನ ಗಂಡ

ಸೂರ್ಯಕಾಂತ ಅವರು ಜಮೀನಿನಿಂದ ಎತ್ತುಗಳನ್ನು ತೆಗೆದುಕೊಂಡು ಮನೆಗೆ ಬರುವಾಗ ಶಂಭು ಸ್ಥಾನಿ ಫೂಲ್ ಹತ್ತಿರ  ಹಿಂದಿನಿಂದ ಒಂದು ವಾಹನವು ಅತೀ ವೇಗ ಮತ್ತು ನಿಷ್ಕಾಳಜಿತನದಿಂದ ಬಂದು ಅವರಿಗೆ ಅಪಘಾತ ಪಡಿಸಿರುತ್ತಾರೆ ಅಂದರೆ ಸರಿ. ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಿರುತ್ತೇನೆ ಅಂದರೆ ಸರಿ. ಅಪಘಾತ ಪಡಿಸಿದ ವ್ಯಕ್ತಿಯ ಹೆಸರು ವಿಚಾರಿಸಿದಾಗ ತಾಜೋದ್ದೀನ್ ಮುನ್ನಳ್ಳಿ ಅಂತ ಗೊತ್ತಾಗಿರುತ್ತದೆ ಅಂದರೆ ಸರಿ. ಸದರಿ ಅಪಘಾತ ಪಡಿಸಿದ ವಾಹನ ಸಂಃ ಕೆಎ 32 / ಇಎಫ್ 8758 ಇತ್ತು ಎಂದರೆ ಸರಿ. ನಂತರ ನಾನು ಮತ್ತು ಚಾಸಾ 6 ರಿಂದ 9 ಮತ್ತು 11 ರವರು ಸೇರಿಕೊಂಡು ಮೃತ ಸೂರ್ಯಕಾಂತ ರವರನ್ನು ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ. ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ದಿಃ 26.05.2023 ರಂದು ಮನೆಗೆ ಬಂದಿರುತ್ತೇವೆ ಎಂದರೆ ಸರಿ. ನಂತರ ದಿಃ 04.06.2023 ರಂದು ಸೂರ್ಯಕಾಂತ ರವರಿಗೆ ಆರೋಗ್ಯದಲ್ಲಿ ವ್ಯತ್ಯಾಸ ಆಗಿದ್ದ ಕಾರಣ ನಮ್ಮ ಹತ್ತಿರ ಹಣಕಾಸಿನ ತೊಂದರೆ ಆದ ಕಾರಣ ಅವರನ್ನು ಕಲಬುರಗಿಯ ಯುನೈಟೆಡ್ ಆಸ್ಪತ್ರೆಯ ಬದಲಾಗಿ  ಸರ್ಕಾರಿ ಆಸ್ಪತೆಗೆ ಕರೆದುಕೊಂಡು ಹೋಗುವಾಗ ಆಸ್ಪತ್ರೆಯ ಮುಖ್ಯ ದ್ವಾರದ ಬಳಿ ಮೃತರಾಗಿರುತ್ತಾರೆ ಅಂದರೆ ಸರಿ. ಆಗ ಸಮಯ ಮಧ್ಯ ರಾತ್ರಿ 12-30 ಗಂಟೆ ಆಗಿತ್ತು ಅಂದರೆ ಸರಿ. ಈ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಡಿ ಹೆಚ್ ಹೆಚ್ ವಕೀಲರಿಂದಃ**

ಘಟನಾ ಸ್ಥಳದಿಂದ ನಮ್ಮ ಮನೆಯು ಸ್ವಲ್ಪ ದೂರದಲ್ಲಿರುತ್ತದೆ. ನಾನು ಘಟನೆ ನಡೆದಾಗ ಮೃತ ಸೂರ್ಯಕಾಂತ ರವರ ಜೊತೆ ಇದ್ದೆನು. ದ್ವಿಚಕ್ರ ವಾಹನ ಸಂಖ್ಯೆಯನ್ನು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಶಾಲೆ ಕಲಿತಿಲ್ಲ ಅಂತ ಹೇಳುತ್ತಾರೆ. ನನಗೆ ಸದರಿ ವಾಹನದ ಬಣ್ಣವನ್ನು ಹೇಳಲು ಬರುವುದಿಲ್ಲ. ನಾನು ಪೋಲಿಸರು ಹೇಳಿಕೆಯನ್ನು ಬರೆದ ನಂತರ ಸಹಿ ಮಾಡಿರುತ್ತೇನೆ ಎಂದರೆ ಸರಿ ಅಲ್ಲ. ನಾನು ಹೇಳಿದಂತೆ ಪೋಲಿಸರು ಹೇಳಿಕೆಯನ್ನು ಬರೆದಿರುತ್ತಾರೆ. ನಾನು ಘಟನೆ ನಡೆದಾಗ ಮೃತ ಸೂರ್ಯಕಾಂತ ರವರ ಜೊತೆಗೆ ಇದ್ದೆನು ಅಂತ ಪೋಲಿಸರ ಮುಂದೆ ಹೇಳಿರುತ್ತೇನೆ. ದ್ವಿಚಕ್ರ ವಾಹನವು ಕಡಗಂಚಿ ರಸ್ತೆಗೆ ಹೋಗುವ ಮಾರ್ಗವಾಗಿ ಬಿದ್ದಿತ್ತು. ಸೂರ್ಯಕಾಂತ ರವರನ್ನು ಕಾಶಿನಾಥ, ಈರಣ್ಣ, ಪಂಡಿತ, ಶರಣಬಸಪ್ಪ, ಇನ್ನೊಬ್ಬ ಶರಣಬಸಪ್ಪ, ನನ್ನ ಅಳಿಯ ಈರಣ್ಣ, ರಾಚಣ್ಣ, ಸಿದ್ದರಾಮ, ಬಾಬುರಾವ, ಬಸವರಾಜ ಮತ್ತು ನನ್ನ ಮಗಳು ತಾರಾಬಾಯಿ ನನ್ನ ನೆಗೆಣಿ ಸರುಬಾಯಿ ಮತ್ತು ನಾನು ಸೇರಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಘಟನಾ ಸ್ಥಳದಲ್ಲಿ ನಾನು ಆರೋಪಿಯನ್ನು ನೋಡಿರುತ್ತೇನೆ. ನಾನು ಘಟನಾ ಸ್ಥಳದಲ್ಲಿ ಅವನ ಹೆಸರನ್ನು ವಿಚಾರಿಸಿರುತ್ತೇನೆ. ಆರೋಪಿಯ ವಾಹನದ ಮೇಲೆ ಒಂದು ದೊಡ್ಡ ಬಳೆಯ ಗಂಟು ಇತ್ತು. ಸದರಿ ಬಳೆಯ ಗಂಟನ್ನು ಯಾರು ಬಿಚ್ಚಿ ನೋಡಿಲ್ಲ. ಅದು ಬಳೆಯ ಗಂಟು ಅಂತ ನಾವು ನೋಡಿರುತ್ತೇವೆ ಅದು ರಸ್ತೆಯ ಮೇಲೆ ಬಿದ್ದಿರುತ್ತದೆ. ಸೂರ್ಯಾಕಾಂತ ಅವರನ್ನು ಸುಮಾರು 8-10 ಬಾರಿ ಯುನೈಟೆಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ದ್ವಿಚಕ್ರ ವಾಹನವನ್ನು ಊರಿನ ಜನರು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ.

ದ್ವಿಚಕ್ರ ವಾಹನವನ್ನು ನನ್ನ ಭಾವ ರಾಮಚಂದ್ರ ರವರು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಆರೋಪಿಯ ವಾಹನದ ಮೇಲೆ ಬಳೆಯ ಗಂಟು ತೆಗೆದುಕೊಂಡು ಹೋಗುತ್ತಿದ್ದ ಕಾರಣ ನಿಧಾನವಾಗಿ ತೆಗೆದುಕೊಂಡು ಹೋಗುತ್ತಿದ್ದನು ಅತೀ ವೇಗದಿಂದ ಹೋಗುತ್ತಿರಲಿಲ್ಲ ಅಂದರೆ ಸರಿ ಅಲ್ಲ. ಘಟನಾ ಸ್ಥಳದಲ್ಲಿ ದೊಡ್ಡ ದೊಡ್ಡ ವಾಹನಗಳು ಓಡಾಡುತ್ತವೆ ಅಂದರೆ ಸರಿ. ಯಾವುದೋ ಒಂದು ದೊಡ್ಡ ವಾಹನ ಸೂರ್ಯಕಾಂತ ಅವರಿಗೆ ಅಪಘಾತ ಪಡಿಸಿ ಹೋಗಿದ್ದು ಹಿಂದಿನಿಂದ ನಿಧಾನವಾಗಿ ಬರುತ್ತಿದ್ದ ಆರೋಪಿಯನ್ನು ಹಿಡಿದು ಅವನ ಮೇಲೆ ಆರೋಪ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನಾನು ಘಟನೆ ನಡೆದ ದಿನ ಜಮೀನಿಗೆ ಹೋಗಿರಲಿಲ್ಲ ಅಪಘಾತದ ಸಮಯದಲ್ಲಿ ನಾನು ಸೂರ್ಯಕಾಂತ ಅವರ ಜೊತೆ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಅಪಘಾತದ ದಿನ ಮೃತ ಸೂರ್ಯಕಾಂತ ಅವರೊಂದಿಗೆ ಜಮೀನಿಗೆ ಹೋಗಿ ಅಪಘಾತದ ಸಮಯದಲ್ಲಿ ಅವರ ಜೊತೆಗೆ ಇದ್ದ ಬಗ್ಗೆ ಹೇಳಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆ ಇರುವುದಿಲ್ಲಾಃ</u>**

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂ ದ